## ಕೇಂದ್ರ ಸಚಿವ ರಾಧಾ ಮೋಹನ್ ಸಿಂಗ್ ಅಭಿಪ್ರಾಯ

# ಕೃಷಿಯ ಪ್ರಗತಿಗೆ ಸಂಶೋಧನೆಗಳು ನಡೆಯಲಿ

■ **ವಿಕ ಸುದ್ದಿಲೋಕ** ಯಲಹಂಕ

ಆದಾಯ ದ್ವಿಗುಣವಾಗಲು ವೈಜ್ಞಾನಿಕ ಬೇಸಾಯದ ಕಡೆಗೆ ಕೃಷಿಕರು ಆಕರ್ಷಿತರಾಗಲು ಕೇಂದ್ರ ಕೃಷಿ ಮಂತ್ರಾಲಯ ಸಾಕಷ್ಟು ಸಂಶೋಧನೆಗಳನ್ನು ಹಮ್ಮಿಕೊಂಡಿವೆ ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ರಾಧಾ ಮೋಹನ್ ಸಿಂಗ್ ಹೇಳಿದರು.

ರಾಷ್ಟ್ರೀಯ ಕೃಷಿ ಪ್ರಾಮುಖ್ಯ ಕೀಟಗಳ ಬ್ಯೂರೋ ಸಂಶೋಧನಾ ಕೇಂದ್ರ(ಐಸಿಎಆರ್) ಗಂಗೇನಹಳ್ಳಿಯಲ್ಲಿ ಏರ್ಪಡಿಸಿದ್ದ ಕೃಷಿ ಸಂಶೋಧನೆಗಳ ಅವಲೋಕನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

''ರೈತರು ಕೃಷಿ ಸುಸ್ಥಿರತೆಯನ್ನು ಕಾಣಬೇಕು. ಪ್ರಧಾನಿ ಮೋದಿಯವರ ಯೋಜನೆಗಳಂತೆ 2022ರ ವೇಳೆಗೆ ದೇಶದ ರೈತರ ಆದಾಯ ದ್ವಿಗುಣವಾಗಬೇಕು. ಈ ನಿಟ್ಟಿನಲ್ಲಿ ತೋಟಗಾರಿಕೆ, ಮೀನುಗಾರಿಕೆ, ಪಶುಸಂಗೋಪನಾ ವಲಯಗಳಲ್ಲಿ ಸಾಕಷ್ಟು ಸಂಶೋಧನೆಗಳು ನಡೆಯುತ್ತಿವೆ. ಈ ತಂತ್ರಜ್ಞಾನಗಳು ರೈತರನ್ನು ತಲುಪುವಂತೆ ಮಾಡಲು ಕೃಷಿ ಮಂತ್ರಾಲಯದಿಂದ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.



ಐಸಿಎಆರ್ ಸಂಶೋಧನಾ ಸಂಸ್ಥೆಗಳ ನಿರ್ದೇಶಕರು, ಅಧಿಕಾರಿಗಳ ಸಮಾವೇಶದಲ್ಲಿ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ರಾಧಾ ಮೋಹನ್ ಸಿಂಗ್ ಪಾಲ್ಗೊಂಡಿದ್ದರು.

ಅವರು ನೂರು ತಂತ್ರಜ್ಞಾನಗಳನ್ನು ಬಿಡುಗಡೆಮಾಡಿರುವ ವಿಜ್ಞಾನಿಗಳನ್ನು ಇದೇ ಸಂದರ್ಭದಲ್ಲಿ ಅಭಿನಂದಿಸಿದರು. ನವದೆಹಲಿಯ ಐಸಿಎಆರ್‌ನ ಮಹಾನಿರ್ದೇಶಕ ಡಾ ಟಿ ಮೊಹಪಾತ್ರ ಮಾತನಾಡಿ ''ದೇಶದ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ಸಂಶೋಧನೆಗಳು ಆಯಾ ವಲಯಗಳಿಗೆ ತುಂಬಾ ಉಪಕಾರಿ. ಅವುಗಳನ್ನು ರೈತರು ಸದುಪಯೋಗಿಸಿಕೊಂಡಾಗ ಆರ್ಥಿಕ ಪ್ರಗತಿ ಸಾಧ್ಯ,'' ಎಂದರು.

ಸಂಶೋಧನಾ ಸಂಸ್ಥೆಗಳಾದ ಹೆಸರಘಟ್ಟ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಆಡುಗೋಡಿ ಪಶುಸಂಗೋಪನಾ ಸಂಸ್ಥೆ, ಐಪಿಆರ್‌ಐ ಮಣ್ಣು ಸರ್ವೇಕ್ಷಣಾ ಸಂಶೋಧನಾ ಸಂಸ್ಥೆ, ಮೀನುಗಾರಿಕಾ ಸಂಶೋಧನಾ ಸಂಸ್ಥೆಯ ನಿರ್ದೇಶಕರು ಹಾಗೂ ಮುಖ್ಯ ಸಂಶೋಧಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.